ನ್ಯಾಯಾಲಯಕ್ಕೆ ಮೂಲಭೂತ ಸೌಲಭ್ಯ ಕಲ್ಪಿಸುವುದು

13ನೇ ವಿಧಾನಸಭೆ/10ನೇ ಅಧಿವೇಶನ

61 (59) ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ):– ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ, ಮಾನವಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ, ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಮೈಸೂರು ನಗರದಲ್ಲಿರುವ ನ್ಯಾಯಾಲಯಗಳಿಗೆ ಬೇಕಾಗಿರುವ ಮೂಲಭೂತ ಸೌಲಭ್ಯಗಳು ಯಾವುವು (ವಿವರ ನೀಡುವುದು);

ಆ) ನ್ಯಾಯಾಲಯಗಳಿಗೆ ಬಾರ್ ಅಸೋಸಿಯೇಷನ್ ಮತ್ತು ಆಡಳಿತ ವ್ಯವಸ್ಥೆ ಕೋರಿರುವ ಮೂಲಭೂತ ಸೌಲಭ್ಯಗಳ ಕುರಿತು ಸರ್ಕಾರ ಕೈಗೊಂಡಿರುವ ಕ್ರಮ ತಿಳಿಸುವುದು;

ಇ) ನ್ಯಾಯಾಲಯಗಳು ಜಾಗದ ಕೊರತೆ ಅನುಭವಿಸುತ್ತಿದ್ದು ಈ ಬಗ್ಗೆ ಸರ್ಕಾರ ಯಾವ ಕ್ರಮ ವಹಿಸಿದೆ;

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ, ಮಾನವಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ, ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಹಾಗೂ ಬೆಂಗಳೂರು ಜಲಮಂಡಳಿ ಸಚಿವರು):

ಅ) ಮೈಸೂರು ನ್ಯಾಯಾಲಯದ ಕಟ್ಟಡದಲ್ಲಿ ಈ ಕೆಳಗಿನಂತೆ ಮೂಲ ಸೌಲಭ್ಯಗಳು ಬೇಕಾಗಿರುತ್ತವೆ:–

1) ಕಾಂಪೌಂಡ್ ಗೋಡೆ
2) ಜನರೇಟರ್
3) ಪೀಠೋಪಕರಣಗಳು
4) ಸಾರ್ವಜನಿಕ ಶೌಚಾಲಯ: ಪುರುಷ, ಮಹಿಳೆ
5) ನಿರೀಕ್ಷಣಾಲಯ: ಪೊಲೀಸ್, ಅಪರಾಧಿಗಳು, ಅಂಗವಿಕಲರು, ಮಹಿಳೆ ಮತ್ತು ಮಕ್ಕಳು,
6) ಸಾರ್ವಜನಿಕ ಸೌಲಭ್ಯ
7) ವಾಹನಗಳ ನಿಲ್ದಾಣ
8) ಗ್ರಂಥಾಲಯ
9) ಉಪಹಾರಗೃಹ
10) ಕುಡಿಯುವ ನೀರು
11) ಗಣಕ ಯಂತ್ರಗಳ ಸೌಲಭ್ಯ ಜೊತೆಗೆ ಅಂತರಜಾಲ, ಯು.ಪಿ.ಎಸ್.

ಆ) ಸರ್ಕಾರದಿಂದ ಕಳೆದ ವರ್ಷ ಪ್ರತಿ ಬಾರ್ ಅಸೋಸಿಯೇಷನ್‌ಗೆ ಒಂದು ಕಂಪ್ಯೂಟರ್ ಮತ್ತು ಒಂದು ಪ್ರಿಂಟರ್‌ನ್ನು ಒದಗಿಸಲಾಗಿದೆ. ಹಾಗೂ ಪ್ರಸಕ್ತ ಸಾಲಿನಲ್ಲಿ ಜೆರಾಕ್ಸ್ ಯಂತ್ರಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ನ್ಯಾಯಾಲಯಗಳ ಕಟ್ಟಡ ಜಾಗದ ಬಗ್ಗೆ ಪ್ರಸ್ತಾವನೆಯು ಉಸ್ತುವಾರಿ ಸಮಿತಿಯ ಪರಿಶೀಲನೆಯಲ್ಲಿದೆ.

ನಗರ ಪಾಲಿಕೆ ಅನುಮೋದನೆ ಕೋರಿ ಕಳುಹಿಸಿರುವ ಪ್ರಸ್ತಾವನೆಗಳು

62 (61) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ):– ಮಾನ್ಯ ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ರಾಜ್ಯ ಸರ್ಕಾರದ ಅನುಮೋದನೆ ಕೋರಿ ಮೈಸೂರು ಮಹಾನಗರಪಾಲಿಕೆಯಿಂದ ಕಳುಹಿಸಿರುವ ಪ್ರಸ್ತಾವನೆಗಳ ವಿವರಗಳನ್ನು ಪ್ರತಿ ಪ್ರಸ್ತಾವನೆವಾರು ನೀಡುವುದು;

ಆ) ಪ್ರಸ್ತಾವನೆಗಳನ್ನು ಅನುಮೋದನೆ ಕೋರಿ ಕಳುಹಿಸಿದ್ದು ಯಾವಾಗ; ಈ ಪ್ರಸ್ತಾವನೆಗಳ ಕುರಿತು ಸರ್ಕಾರ ಅನುಮೋದನೆ ನೀಡಲು ಅನುಸರಿಸಿರುವ ಕ್ರಮಗಳ ವಿವರ ನೀಡುವುದು;

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):

ಅ) ಮೈಸೂರು ಮಹಾನಗರಪಾಲಿಕೆಯಿಂದ ಸರ್ಕಾರಕ್ಕೆ ಯಾವುದೇ ಪ್ರಸ್ತಾವನೆಯನ್ನು ಸಲ್ಲಿಸಿರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ನರ್ಮ್ ಯೋಜನೆ ಕಾಮಗಾರಿಗಳಿಗೆ ಆರ್ಥಿಕ ತೊಂದರೆ

63 (62) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್.:– ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ, ಮಾನವಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ, ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಮೈಸೂರು ನಗರದಲ್ಲಿ ಜೆ.ಎನ್.ಎನ್.ಯು.ಆರ್.ಎಂ. ಯೋಜನೆಯಡಿಯಲ್ಲಿ ಕೈಗೊಳ್ಳಲಾಗುತ್ತಿರುವ ಅಭಿವೃದ್ಧಿ ಕಾಮಗಾರಿಗಳ ಪೈಕಿ ಪೂರ್ಣಗೊಳಿಸಿರುವ ಕಾಮಗಾರಿ ವಿವರ ನೀಡುವುದು;